mortgage of surplus land in favour of financial institutions/banks if such requests are made by VISL/SAIL.

7. i) VISL will provide for liability, if any, on account of gratuity, absorption of contract labour including the period prior to signing of this MOU.

ii) VISL will endeavour to establish a captive power generation plant to utilise Blast Furnace Gas, at the earliest, in order to reduce the dependence on KEB which is facing shortage of power.

8. The above concessions/reliefs would be available to VISL as a separate entity and subsequently as a unit of SAIL.

This MOU comes into force with immediate effect and shall be in force till all the parties to the MOU completely discharge their obligations enumerated herein above.

ಎಂ.ಪಿ.ಎಂ. ನಲ್ಲಿ ಅರಣ್ಯ ಬೆಳೆಸುವ ಕಾರ್ಯಕ್ರಮ.

2937 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎಂ.ಪಿ.ಎಂ. ಕಚ್ಚಾ ವಸ್ತು ತಯಾರಿಕೆಗಾಗಿ ಎಷ್ಟು ಎಕರೆ ಅರಣ್ಯವನ್ನು ಬೆಳೆಸುತ್ತಿದೆ, ಎಲ್ಲೆಲ್ಲಿ ಯಾವ ಗ್ರಾಮಗಳಲ್ಲಿ ಬೆಳೆಸಲಾಗುತ್ತಿದೆ?*

ಆ) *ಎಷ್ಟು ವರುಷಗಳಿಂದ ಅರಣ್ಯವನ್ನು ಬೆಳೆಸಲಾಗುತ್ತಿದೆ, ಇದುವರೆವಿಗೂ ಎಷ್ಟು ಹಣವನ್ನು ತೊಡಗಿಸಲಾಗಿದೆ, ಎಷ್ಟು ಕಚ್ಚಾ ವಸ್ತುಗಳನ್ನು ತಯಾರಿಸಲಾಗಿದೆ?*

ಇ) *ಅರಣ್ಯ ಬೆಳೆಸುವ ಕಾರ್ಯದಲ್ಲಿ ಉತ್ತಮ ಫಲಿತಾಂಶಗಳು ಲಭ್ಯವಾಗಿದೆಯೇ, ಯಾವ ರೀತಿಯ ಫಲಿತಾಂಶ ದೊರೆತಿದೆ. ಇದರಿಂದಾಗಿ ಕಂಪನಿಗೆ ಆದ ಆರ್ಥಿಕ ಲಾಭ ಎಷ್ಟು, ಬೇರೆ ಯಾವ ರೀತಿಯ ಅನುಕೂಲಗಳು ಇದರಿಂದಾಗಿದೆ, (ವಿವರವಾದ ಮಾಹಿತಿ ನೀಡುವುದು)?*

ಈ) *ಅರಣ್ಯ ಅಭಿವೃದ್ಧಿಗೆ ಮತ್ತು ರಕ್ಷಣೆಗೆ ಎಷ್ಟು ಸಿಬ್ಬಂದಿಯನ್ನು ನೇಮಿಸಲಾಗಿದೆ; ಯಾವ ಯಾವ ರೀತಿಯ ಸಿಬ್ಬಂದಿ ತೊಡಗಿಸಲಾಗಿದೆ, ಅವರ ವೇತನ ಶ್ರೇಣಿಯೇನು (ವಿವರವಾದ ಮಾಹಿತಿಯನ್ನು ನೀಡುವುದು)?*

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಸರ್ಕಾರದಿಂದ 30 ಸಾವಿರ ಹೆಕ್ಟೆರ್ ಅರಣ್ಯ ಪ್ರದೇಶವನ್ನು ಎಂ.ಪಿ.ಎಂ. ನೀಡಲಾಗಿದೆ. ಇದುವರೆವಿಗೂ ಒಟ್ಟು 30,605 ಹೆಕ್ಟೆರ್ ಪ್ರದೇಶದಲ್ಲಿ (ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಹಾಗೂ ಸಂಶೋಧನೆ ನೆಡುತೋಪುಗಳು ಸೇರಿ) ಅರಣ್ಯ ಬೆಳೆಸಲಾಗಿದೆ.

ಆ) 1981ನೇ ಇಸವಿಯಿಂದ ನೆಡುತೋಪುಗಳನ್ನು ಬೆಳೆಸಲಾಗಿದೆ. ಇದುವರೆವಿಗೂ ಒಟ್ಟು ರೂ. 92.46 ಕೋಟಿ ಹಣವನ್ನು ತೊಡಗಿಸಲಾಗಿದೆ. ಈ ನೆಡುತೋಪುಗಳ ಖಿಟಾವು ಕೆಲಸವನ್ನು 1991ನೇ ಇಸವಿಯಿಂದ ಶುರುಮಾಡಿದ್ದು, ಪ್ರತಿ ವರ್ಷ ಈ ಕೆಳಗಿನಂತೆ ಕಚ್ಚಾ ವಸ್ತು ಕಾಗದದ ತಯಾರಿಕೆಗೆ ಬಳಸಲಾಗುತ್ತಿದೆ.

ಇಸವಿ	ನೀಲಗಿರಿ	ಅಕೇಶಿಯ	ಒಟ್ಟು (ಟನ್‌ಗಳಲ್ಲಿ)
1991-92	44055.000	4343.000	91398.000
1992-93	14345.030	1805.965	86150.995
1993-94	14894.520	95895.270	110789.790
1994-95	33481.380	111742.010	145223.390
1995-96	25673.980	92480.400	118154.380
1996-97	20960.000	68585.000	89545.000

ಇ) ಹೌದು, ಹೇಗೆಂದರೆ, ಯಾವ ಇಳುವರಿ ಇಲ್ಲದಂತಹ ಒಳ ಪ್ರದೇಶದಲ್ಲಿ ನೀಲಗಿರಿ ಮರವನ್ನು ಪ್ರತಿ ಹೆಕ್ಟೆರ್‌ನಲ್ಲಿ ಸರಾಸರಿ 20 ಟನ್ ಬರುವಂತ ಹಾಗೂ ಮಲೆನಾಡು ಪ್ರದೇಶದಲ್ಲಿ ಅಕೇಶಿಯಾ - ಕ್ಯಾಷ್ಯುರಿಯಾ ಮರಗಳನ್ನು ಸರಾಸರಿ 60 ಟನ್ ಇಳುವರಿ ಬರುವಂತೆ ಮಾಡಿರುವುದು ಗಮನಾರ್ಹ ಸಾಧನೆಯಾಗಿದೆ. ಇದರಿಂದ ಸ್ಥಳೀಯ ಜನರಿಗೆ ಉದ್ಯೋಗ ಅವಕಾಶ ನೀಡಲಾಗಿದೆ. ಹಾಗೂ ಶೇಕಡಾ 35 ಮರದ ರಂಬೆ-ಟೊಂಗೆಗಳನ್ನು ಪುಕ್ಕಟೆಯಾಗಿ ಆಯಾ ಗ್ರಾಮಸ್ಥರಿಗೆ ನೀಡಲಾಗುತ್ತಿದೆ ಹಾಗೂ ಇಳುವರಿಯ ಶೇಕಡಾ 12.5 ಭಾಗವನ್ನು ಅರಣ್ಯ ಇಲಾಖೆಗೆ ಗುತ್ತಿಗೆ ಹಣದ ಬದಲಾಗಿ ನೀಡಲಾಗುತ್ತಿದ್ದು, ಇದನನ್ನು ಸ್ಥಳೀಯ ಜನರಿಗೆ ಉರುವಲು ಸೌದೆಯಾಗಿ ವಿತರಿಸಲಾಗುತ್ತಿದೆ. ಇದರಿಂದ ಇಲಾಖೆಗೆ ಒಳ್ಳೆಯ ಲಾಭವಾಗಿರುತ್ತದೆ. ನೆಡುತೋಪುಗಳಿಂದ ನಿರಂತರ ಕಚ್ಚಾಮಾಲು ಸರಬರಾಜು ಆಗುತ್ತಿರುವುದರಿಂದ ಕಚ್ಚಾ ಮಾಲುಗಳನ್ನು ಹೊರಗಡೆಯಿಂದ ಅಧಿಕ ಬೆಲೆಗೆ ತರಲು ಅವಕಾಶವಿರುವುದಿಲ್ಲ.

ಈ) ಅರಣ್ಯ ಅಭಿವೃದ್ಧಿಗೆ ಮತ್ತು ರಕ್ಷಣೆಗೆ ಒಟ್ಟು 692 ಜನರಿರುತ್ತಾರೆ. ಈ ವಿವರ ಕೆಳಕಂಡಂತೆ ಇದೆ:

1)	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ನಿರ್ದೇಶಕರು (ಅರಣ್ಯ)	-	1	ಎರವಲು ಸೇವೆಯಲ್ಲಿರುವವರು (ವೇತನ ಸರ್ಕಾರ ನಿಯಮದನುಸಾರ)
2)	ಅರಣ್ಯ ಸಂರಕ್ಷಣಾಧಿಕಾರಿಗಳು	-	1	
3)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು	-	5	
4)	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು	-	1	
5)	ವಲಯಾರಣ್ಯಾಧಿಕಾರಿಗಳು	-	29	
6)	ವನಪಾಲಕರು	-	9	
7)	ಮೊದಲನೇ ದರ್ಜೆ ಸಹಾಯಕರು	-	2	
8)	ವಿನ್ಯಾಸಕರು	-	1	
9)	ಅಧೀಕ್ಷಕರು	-	1	
	ಒಟ್ಟು		**50**	
	ಕಾರ್ಖಾನೆಯ ನೌಕರರು	-	108	(ಕಂಪನಿಯ ವೇತನ ಶ್ರೇಣಿ ಪ್ರಕಾರ)
	ಕ್ರೋಡೀಕೃತ ಅರಣ್ಯ ಕಾರ್ಮಿಕರು	-	534	(ಸಂಚಿತ ವೇತನ ರೂ. 1000-00 ರಿಂದ ರೂ. 1490-00 ರವರೆಗೆ. ಈಗ ಕನಿಷ್ಠ ವೇತನ ಜಾರಿ ಗೊಳಿಸ ಲಾಗುತ್ತಿದೆ.)
	ಒಟ್ಟು		**692**	

ಶಿವಮೊಗ್ಗ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಕುರಿತು.

2938 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ಸಕ್ಕರೆ ಕಾರ್ಖಾನೆಗಳು ಮತ್ತು ಖಂಡಸಾರಿ ಘಟಕಗಳು ಎಷ್ಟು; ಇವುಗಳ ಅರೆಯುವ ಸಾಮರ್ಥ್ಯ ಎಷ್ಟು?

ಆ) 1997-98ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆದ ಕಬ್ಬಿನ ಪ್ರಮಾಣವೆಷ್ಟು?

ಇ) ಈಗಿರುವ ವ್ಯವಸ್ಥೆಯಲ್ಲಿ ಪೂರ್ಣ ಕಬ್ಬನ್ನು ಅರೆಯಲು ಸಾಧ್ಯವೇ?